## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 23/2024**

| | | | | | |
|---|---|---|---|---|---|
| **ಸಾಕ್ಷಿದಾರರ ಹೆಸರು** | ಃ | ಸುನೀಲ್ ಕುಮಾರ್ | ಪ್ರಮಾಣ ಮಾಡಿಸಿದ ದಿನಾಂಕಃ | | |
| **ತಂದೆ/ಗಂಡನ ಹೆಸರು** | ಃ | ಪ್ರಭಾಕರ್ | **17.07.2025** | | |
| **ವಯಸ್ಸು** | ಃ | 37 **ವರ್ಷ** | | | |
| **ವೃತ್ತಿ** | ಃ | ಐಟಿ ಕಂಪನಿ ಕೆಲಸ | **ಪ್ರಾ.ಸಾ.** | ಃ | 01 |
| **ವಾಸಸ್ಥಳ** | ಃ | ಬೆಂಗಳೂರು | **ಚಾ.ಸಾ.** | ಃ | **01** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ನನಗೆ ತಾಯಿಯಾಗಬೇಕು. ನಾನು 2009 ನೇ ಇಸವಿಯಿಂದ ಬೆಂಗಳೂರಿನಲ್ಲಿ ಸಾಫ್ಟವೇರ್ ಇಂಜಿನಿಯರ್ ಆಗಿ ಕೆಲಸ ಮಾಡಿಕೊಂಡಿರುತ್ತೇನೆ. ನನಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಗೊತ್ತಿರುವುದಿಲ್ಲ ಮತ್ತು ನೋಡಿರುವುದಿಲ್ಲ. ಈಗ್ಗೆ 2 ವರ್ಷದ ಹಿಂದೆ ನಾನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾಗ ಮೈಸೂರಿನಲ್ಲಿರುವ ನಮ್ಮ ಸ್ವಂತ ಮನೆಯ ಪಕ್ಕದ ವಾಸಿ ಲಿಂಗ್ಟ ರವರು ರಾತ್ರಿ 7.00 ಗಂಟೆ ಮೇಲ್ಪಟ್ಟು ಫೋನ್ ಮಾಡಿ ನನ್ನ ತಾಯಿ ಮನೆಯಲ್ಲಿ ಮೂರ್ಚೆ ಹೋಗಿರುತ್ತಾರೆ ಮತ್ತು ರಕ್ತ ಬಂದಿರುತ್ತದೆ ಎಂದು ತಿಳಿಸಿದರು. ನಾನು ಬೆಂಗಳೂರಿನಿಂದ ಹೊರಟು ಮೈಸೂರಿಗೆ ಬಂದು ನೇರವಾಗಿ ಆಸ್ಪತ್ರೆಗೆ ಹೋಗಿ ನೋಡಲಾಗಿ ನನ್ನ ತಾಯಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಅವರಿಗೆ ಮೂಗಿನ ಮೇಲೆ ಮತ್ತು ಕಣ್ಣಿನ ಹತ್ತಿರ ಗಾಯಗಳು ಆಗಿದ್ದವು. ನನ್ನ ತಾಯಿ ಐ.ಸಿ.ಯು ದಲ್ಲಿ ಇದ್ದು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಮಾರನೇ ದಿವಸ ನನ್ನ ತಾಯಿಯನ್ನು ಕೇಳಿದಾಗ ಯಾರೋ ಬಂದು ನನಗೆ

ಮುಖವನ್ನು ಮುಚ್ಚಿ ಹೊಡೆದಿದ್ದರು ಅಂತ ತಿಳಿಸಿದ್ದರು. ನನ್ನ ತಾಯಿಯ ಕಡೆಯಿಂದ ಆ ವ್ಯಕ್ತಿ ಏನನ್ನಾದರೂ ತೆಗೆದುಕೊಂಡು ಹೋಗಿದ್ದರೋ ಇಲ್ಲವೋ ನನಗೆ ತಿಳಿಸಿರಲಿಲ್ಲ ಮತ್ತು ಆ ವ್ಯಕ್ತಿ ಯಾರು ಎಂದು ಸಹ ನನಗೆ ತಿಳಿಸಿರಲಿಲ್ಲ. ನಾನು ಈಗ ನೋಡುತ್ತಿರುವ ಫೋಟೋದಲ್ಲಿ ಇರುವ ಸರ ಮತ್ತು ಓಲೆಗೆ ಹಾಕಿಕೊಳ್ಳುವ ಮಾಟಿ ನನ್ನ ತಾಯಿಯದು ಇರಬಹುದು. ಆ ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿದ್ದೆ. ನಾನು ಕೊಟ್ಟಂತಹ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ದೂರನ್ನು ತೋರಿಸಲಾಯಿತು. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ. 1 (ಎ) ಎಂದು ಗುರುತಿಸಲಾಯಿತು. ನಾನು ದೂರನ್ನು ಕೊಟ್ಟ ಮೇಲೆ ಪೊಲೀಸರು ಮನೆಯ ಹತ್ತಿರ ಬಂದು ಸ್ಥಳವನ್ನು ನೋಡಿದರು. ನಾನು ಈಗ ನೋಡುತ್ತಿರುವ ಸಹಿ ನನ್ನ ಸಹಿ ಇರುತ್ತದೆ. ಸಾಕ್ಷಿದಾರರು ನೋಡಿ ಗುರುತಿಸಿದ ದಾಖಲೆ ಮಹಜರ್ ಇದ್ದು ಅದನ್ನು ನಿಪಿ-2 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

( ಸಾಕ್ಷಿದಾರರಿಗೆ ಬಟ್ಟೆಯಲ್ಲಿ ಹಾಕಿ ಸೀಲು ಮಾಡಿರುವ ವಸ್ತುಗಳನ್ನು ತೆಗೆದು ಸಾಕ್ಷಿದಾರರಿಗೆ ತೋರಿಸಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ನಮ್ಮ ಮನೆಗೆ ಪೊಲೀಸರು ಬಂದಾಗ ನಾನು ನೋಡುತ್ತಿರುವ ಚೊಂಬು ಸ್ಥಳದಲ್ಲಿ ಬಿದ್ದಿತ್ತು ಅದನ್ನು ಪೊಲೀಸರು ತೆಗೆದುಕೊಂಡು ನೋಡಿದರು. ಸಾಕ್ಷಿದಾರರು ನೋಡಿ ಗುರುತಿಸಿದ ಚೊಂಬನ್ನು ಎಂ.ಒ-1 ಎಂದು ಗುರುತಿಸಲಾಯಿತು. ಪೊಲೀಸರು ಮತ್ತೆ ಏನನ್ನಾದರು ತೆಗೆದುಕೊಂಡಿದ್ದರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

ದಿನಾಂಕ 29.03.2023 ರಂದು ಹಳೆ ಕೆಸರೆಯ ಗಂಗಾ ನಗರದಲ್ಲಿ ಕಟ್ಟಣ ನಿರ್ಮಾಣ ಕಾರ್ಯದಲ್ಲಿ ಗಾರೆ ಕೆಲಸ ಮಾಡಿಕೊಂಡಿದ್ದ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನನ್ನ ತಾಯಿಗೆ ನೀರನ್ನು ಕೇಳಿ ಅವರು ನೀರು ತರಲು ಒಳಹೋದಾಗ ಆರೋಪಿತನು ಎಂ.ಒ−1 ರಿಂದ ನನ್ನ ತಾಯಿಯ ಮುಖಕ್ಕೆ ಬಲವಾಗಿ ಹೊಡೆದಿದ್ದ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ನಾನು ನಿಪಿ−1 ರಲ್ಲಿ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನೇ ನನ್ನ ತಾಯಿಯ ಕತ್ತಿನಲ್ಲಿ ಇದ್ದಂತಹ ಸರ, ಓಲೆ, ಮಾಟಿ ಮತ್ತು ಡ್ರಾಪ್ಸ್ ಕಿತ್ತುಕೊಂಡು ಹೋಗಿರುತ್ತಾನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನ ಹೆಸರನ್ನು ನಿಪಿ−1 ರಲ್ಲಿ ಹೇಳಿ ಆತನ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ನಾನು ಕೇಳಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಸ್ಥಳ ಪಂಚನಾಮೆಗೆ ಬಂದಾಗ ಸ್ಥಳದಲ್ಲಿ ಬಿದ್ದಿದ್ದ ರಕ್ತವನ್ನು ಹತ್ತಿಯಲ್ಲಿ ತೆಗೆದುಕೊಂಡಿದ್ದರು ಮತ್ತು ರಕ್ತವಲ್ಲದ ಹತ್ತಿ ಸಹ ತೆಗೆದುಕೊಂಡು ನಾನು ಈಗ ನೋಡುತ್ತಿರುವ ಎಂ.ಒ−1 ಅನ್ನು ಸಹ ಸ್ಥಳದಿಂದ ತೆಗೆದುಕೊಂಡಿದ್ದರು ಎಂದರೆ ಸರಿ. ನಾನು ಸ್ಥಳದಲ್ಲಿ ಮಾಡಿದ್ದಂತಹ ನಿಪಿ−2 ಕ್ಕೆ ಸಹಿ ಮಾಡಿದ್ದೆ ಎಂದರೆ ಸರಿ. ನಾನು ಈಗ ನೋಡುತ್ತಿರುವ ರಕ್ತಮಯವಾದ ಕಾಟನ್ ಮತ್ತು ರಕ್ತಮಯವಲ್ಲದ ಕಾಟನ್ ಅನ್ನು ನಿಪಿ−2 ರ ವೇಳೆಯಲ್ಲಿ ಸಂಗ್ರಹಿಸಿದಂತಹ ವಸ್ತುಗಳು ಇರುತ್ತವೆ ಎಂದರೆ ಸರಿ. ಸಾಕ್ಷಿದಾರರು ನೋಡಿ ಗುರುತಿಸಿದ ರಕ್ತಮಯವಾದ ಹತ್ತಿ ಮತ್ತು ರಕ್ತಮಯವಲ್ಲದ ಹತ್ತಿಯನ್ನು ಒಟ್ಟಾಗಿ ಎಂ.ಒ−2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನು ಎಂ.ಒ−1 ರಿಂದ ನನ್ನ ತಾಯಿಯ ಮುಖಕ್ಕೆ ಬಲವಾಗಿ ಹೊಡೆದು ಕೆಳಕ್ಕೆ ಬೀಳಿಸಿ ಟವಲ್ ಅನ್ನು ಬಾಯಿಗೆ ಹಾಕಿ ಸೀರೆ ಸೆರಗಿನಿಂದ ಕುತ್ತಿಗೆಗೆ ಬಿಗಿದು ಹಲ್ಲೆ ಮಾಡಿ ಕತ್ತಿನಲ್ಲಿ ಇದ್ದ ಚಿನ್ನದ ಸರ, ಕಿವಿಯಲ್ಲಿ ಇದ್ದ ಓಲೆ ಮಾಟಿ ಮತ್ತು ಡ್ರಾಪ್ಸ್ ಅನ್ನು ಕಿತ್ತುಕೊಂಡು ಹೋಗಿದ್ದ ಎಂದರೆ ಸರಿಯಲ್ಲ. ನಾನು ಈಗ ನೋಡುತ್ತಿರುವ ಫೋಟೋಗಳಲ್ಲಿ ಇರುವ ಬಂಗಾರದ ಒಡವೆಗಳು ನನ್ನ ತಾಯಿಗೆ ಸಂಬಂಧಪಟ್ಟವು ಇರುತ್ತವೆ ಎಂದರೆ ಸರಿ. ಸಾಕ್ಷಿ ಗುರುತಿಸಿದ

2 ಫೋಟೋಗಳನ್ನು ನಿಪಿ–3 ಮತ್ತು 4 ಎಂದು ಗುರುತಿಸಲಾಯಿತು. ನನ್ನ ತಾಯಿ ನ್ಯಾಯಾಲಯದಿಂದ ಬಂಗಾರದ ಒಡವೆಗಳನ್ನು ಬಿಡಿಸಿಕೊಂಡಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನೇ ನನ್ನ ತಾಯಿಗೆ ಬಲವಾಗಿ ಹೊಡೆದು ಫೋಟೋದಲ್ಲಿ ಇರುವ ಒಡವೆಗಳನ್ನು ಕಿತ್ತುಕೊಂಡು ಹೋಗಿದ್ದರು ಸಹ ಗೊತ್ತಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ-**

ಪೊಲೀಸರು ಸ್ಥಳಕ್ಕೆ ಬಂದಾಗ ನಿಪಿ–3 ಮತ್ತು 4 ರಲ್ಲಿ ಇರುವ ಬಂಗಾರದ ಒಡವೆಗಳನ್ನು ನಮ್ಮ ಕಡೆಯಿಂದ ಪ್ರಕರಣಕ್ಕೆ ಬೇಕಾಗುತ್ತದೆ ಎಂದು ಹೇಳಿ ಪೊಲೀಸರು ತೆಗೆದುಕೊಂಡು ಹೋಗಿದ್ದರು ಎಂದರೆ ಸರಿ.

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು